# VIVEKANANDA
## PRE-UNIVERSITY COLLEGE
A Unit of Vivekananda Vidyavardhaka Sangha, Puttur (R.)








# PROSPECTUS

## ABOUT US

Vivekananda Pre University College was established 1965 by Vivekananda Vidyavardhaka Sangha Puttur (R.) with the objective of imparting education to the students of rural and backward areas in and around Puttur.

The College aims at proper shaping of character and inculcating high sense of discipline among the students. Today, the college is identified as one of the best P. U. Colleges in the State in imparting quality education and bringing out the best academic performance from the students.

## ವಿದ್ಯಾಲಯದ ಕುರಿತು

ವಿವೇಕಾನಂದ ಪದವಿ ಪೂರ್ವ ವಿದ್ಯಾಲಯವು ಪುತ್ತೂರು ಮತ್ತು ಆಸುಪಾಸಿನ ಗ್ರಾಮೀಣ ಹಾಗೂ ಹಿಂದುಳಿದ ತಾಲೂಕುಗಳ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ನೀಡುವ ಉದ್ದೇಶದಿಂದ ವಿವೇಕಾನಂದ ವಿದ್ಯಾವರ್ಧಕ ಸಂಘ (ಆರಂಭದಲ್ಲಿ ಪುತ್ತೂರು ವಿದ್ಯಾವರ್ಧಕ ಸಂಘ)ದಿಂದ 1965ರಲ್ಲಿ ಸ್ಥಾಪನೆಗೊಂಡಿತು. ಅಂದಿನಿಂದ ಇಂದಿನವರೆಗೂ ನಮ್ಮಸಂಸ್ಥೆಯು ವಿದ್ಯಾರ್ಥಿಗಳ ಸರ್ವಸೋಮುಖ ಬೆಳವಣಿಗೆಗೆ ಪೂರಕವಾದ, ಶಿಸ್ತುಬದ್ಧ ಪ್ರಜೆಗಳನ್ನು ತಯಾರಿಸುವಂತಹ ಶಿಕ್ಷಣವನ್ನು ನೀಡುತ್ತಾ ಬಂದಿದೆ. ನಮ್ಮ ಸಂಸ್ಥೆಯಲ್ಲಿ ವಿಜ್ಞಾನ, ಕಲೆ ಹಾಗೂ ವಾಣಿಜ್ಯ ಶಿಕ್ಷಣಗಳನ್ನು ನೀಡಲು ಬೇಕಾದ ವಿಶಾಲವಾದ ತರಗತಿ ಕೊಠಡಿಗಳು, ಸಂಸಜ್ಜಿತವಾದ ಎಂಟು ಪ್ರಯೋಗಾಲಯಗಳು, ಸುವ್ಯವಸ್ಥಿತವಾದ ಎರಡು ಗ್ರಂಥಾಲಯಗಳು, ವಿಸ್ತಾರವಾದ ಕ್ರೀಡಾ ಮೈದಾನ ಹಾಗೂ ವ್ಯಾಯಾಮ ಶಾಲೆಗಳಿವೆ. ಇಂದು ವಿವೇಕಾನಂದ ಪದವಿಪೂರ್ವ ಕಾಲೇಜು ಅತ್ಯುತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವ ಮತ್ತು ಉತ್ತಮ ಫಲಿತಾಂಶವನ್ನು ನೀಡುವ ರಾಜ್ಯದ ಸಂಸ್ಥೆಗಳಲ್ಲಿ ಒಂದಾಗಿ ಗುರುತಿಸಲ್ಪಟ್ಟಿದೆ.

## ಕಾಲೇಜು ಆಡಳಿತ ಮಂಡಳಿ

**ಶ್ರೀ ರವೀಂದ್ರ ಪಿ.**
ಅಧ್ಯಕ್ಷರು

**ಶ್ರೀ ಕೃಷ್ಣ ಪ್ರಸಾದ್ ನಡ್ಸಾರು**
ಸಂಚಾಲಕರು

**ಶ್ರೀ ಎಂ. ಗೋಪಾಲಕೃಷ್ಣ ಭಟ್**
ಕೋಶಾಧಿಕಾರಿ

### ಸದಸ್ಯರು

ಶ್ರೀಮತಿ ವತ್ಸಲಾರಾಜ್ಞಿ ಎಂ. । ಡಾ. ಮುರಳಿಕೃಷ್ಣ ರೈ । ಡಾ. ಕೃಷ್ಣಪ್ರಸನ್ನ ಕೆ. । ಡಾ. ಕೆ. ಎನ್. ಸುಬ್ರಹ್ಮಣ್ಯ
ಶ್ರೀ ಸಚಿನ್ ಶೆಣೈ । ಶ್ರೀಮತಿ ಇಂದಿರಾ ಬಿ. ಕೆ.

### ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು (ರಿ) ಇದರ ಪ್ರತಿನಿಧಿ

**ಶ್ರೀ ಸತೀಶ್ ರಾವ್**
ನಿರ್ದೇಶಕರು, ವಿವೇಕಾನಂದ ವಿದ್ಯಾವರ್ಧಕ ಸಂಘ, ಪುತ್ತೂರು (ರಿ.)

### ವಿಶೇಷ ಆಹ್ವಾನಿತರು

**ಡಾ. ಕೆ. ಪ್ರಭಾಕರ ಭಟ್**
ಅಧ್ಯಕ್ಷರು, ವಿವೇಕಾನಂದ ವಿದ್ಯಾವರ್ಧಕ ಸಂಘ, ಪುತ್ತೂರು (ರಿ.)

**ಡಾ. ಕೆ. ಎಂ. ಕೃಷ್ಣಭಟ್,**
ಕಾರ್ಯದರ್ಶಿಗಳು, ವಿವೇಕಾನಂದ ವಿದ್ಯಾವರ್ಧಕ ಸಂಘ, ಪುತ್ತೂರು (ರಿ.)

## ನಮ್ಮಗುರಿ

- ಭಾರತೀಯ ಸಂಸ್ಕೃತಿ ಮತ್ತು ಆಧ್ಯಾತ್ಮಿಕ ಪರಂಪರೆಯನ್ನೊಳಗೊಂಡ ಶುದ್ಧಸರಳ, ಆಧುನಿಕ ಶಿಕ್ಷಣ ಸೌಲಭ್ಯ ಒದಗಿಸುವುದು.
- ವಿದ್ಯಾರ್ಥಿ ಸಮುದಾಯದಲ್ಲಿ ನಿಸ್ವಾರ್ಥ, ಶ್ರದ್ಧಾಪೂರ್ಣ, ರಾಷ್ಟ್ರಸೇವೆಯ ಚೈತನ್ಯವನ್ನು ಉದ್ದೀಪನಗೊಳಿಸುವುದು.
- ಯುವಜನಾಂಗದಲ್ಲಿ ಶ್ರೇಷ್ಠತಮ ಶೀಲ ಸಂವರ್ಧನೆಯನ್ನು ಮೈಗೂಡಿಸುವುದು.
- ವಿದ್ಯಾರ್ಥಿ ಸಮುದಾಯದಲ್ಲಿ ಓರಣದ ನಡತೆ, ಸುಹವ್ಯಾಸ - ಸದಭಿರುಚಿಗಳ ಬೆಳವಣಿಗೆಗೆ ಮಾರ್ಗದರ್ಶನ ನೀಡುವುದು.
- ಸ್ವಯಂ ಶಿಸ್ತಿನ ವರ್ಚಸ್ಸು ವಿದ್ಯಾರ್ಥಿ ಸಮುದಾಯದಲ್ಲಿ ಮೂಡುವಂತೆ ಪ್ರೇರೇಪಿಸುವುದು,
- ಯುವಕ ಯುವತಿಯರು ನಿಜಜೀವನದ ಸಮಸ್ಯೆಗಳನ್ನು ಎದುರಿಸಲು ಅಗತ್ಯವಿರುವ ದೃಷ್ಟಿಕೋನವನ್ನು ಬೆಳೆಸುವುದು.

## ಪದವಿ ಪೂರ್ವ ಶಿಕ್ಷಣ ಸ್ವರೂಪ

ಅವಧಿ : ಎರಡು ವರ್ಷ । ಪ್ರವೇಶಾರ್ಹತೆ : ಎಸ್ಸೆಸ್ಸೆಲ್ಸಿ ಅಥವಾ ತತ್ಸಮಾನ ಪರೀಕ್ಷೆಗಳಲ್ಲಿ ತೇರ್ಗಡೆ

**ವಿಜ್ಞಾನ :**

| | | | |
|---|---|---|---|
| ಭೌತಶಾಸ್ತ್ರ | ಭೌತಶಾಸ್ತ್ರ | ಭೌತಶಾಸ್ತ್ರ | ಭೌತಶಾಸ್ತ್ರ |
| ರಸಾಯನಶಾಸ್ತ್ರ | ರಸಾಯನಶಾಸ್ತ್ರ | ರಸಾಯನಶಾಸ್ತ್ರ | ರಸಾಯನಶಾಸ್ತ್ರ |
| ಗಣಿತ | ಗಣಿತ | ಗಣಿತ | ಗಣಿತ |
| ಜೀವವಿಜ್ಞಾನ | ಸಂಖ್ಯಾಶಾಸ್ತ್ರ | ಇಲೆಕ್ಟ್ರಾನಿಕ್ಸ್ | ಗಣಕವಿಜ್ಞಾನ |

**ವಾಣಿಜ್ಯ**

| | | |
|---|---|---|
| ಸಂಖ್ಯಾಶಾಸ್ತ್ರ | ಸಂಖ್ಯಾಶಾಸ್ತ್ರ | ಸಂಖ್ಯಾಶಾಸ್ತ್ರ |
| ವ್ಯವಹಾರ ಅಧ್ಯಯನ | ವ್ಯವಹಾರ ಅಧ್ಯಯನ | ಗಣಕವಿಜ್ಞಾನ |
| ಲೆಕ್ಕಶಾಸ್ತ್ರ | ಲೆಕ್ಕಶಾಸ್ತ್ರ | ವ್ಯವಹಾರ ಅಧ್ಯಯನ |
| ಅರ್ಥಶಾಸ್ತ್ರ | ಗಣಕವಿಜ್ಞಾನ | ಲೆಕ್ಕಶಾಸ್ತ್ರ |

**ಕಲೆ**

ಇತಿಹಾಸ
ಅರ್ಥಶಾಸ್ತ್ರ
ರಾಜ್ಯಶಾಸ್ತ್ರ
ಸಮಾಜಶಾಸ್ತ್ರ

**ಭಾಷೆ**

ಇಂಗ್ಲೀಷ್
ಕನ್ನಡ । ಸಂಸ್ಕೃತ । ಹಿಂದಿ

**ಕಲಿಕಾ ಮಾಧ್ಯಮ**

ಇಂಗ್ಲೀಷ್ । ಕನ್ನಡ

## Subject Combinations

**SCIENCE**
PCMB
PCME
PCMCs
PCMS

Physics | Chemistry | Mathematics
Biology | Computer Science
Electronics | Statistics

**COMMERCE**
SEBA
SCsBA
ECsBA

Statistics | Economics
Business Studies | Computer Science
Accountancy

**ARTS**
HEPS

History | Economics
Political Science
Sociology

**LANGUAGE**

English
Kannada | Sanskrit | Hindi

**Medium of Instruction**

English | Kannada



## ಆರ್ಥಿಕ ಸೌಲಭ್ಯಗಳು

- ಅರ್ಹ ವಿದ್ಯಾರ್ಥಿಗಳಿಗೆ ಕೇಂದ್ರ ಮತ್ತು ರಾಜ್ಯ ಸರಕಾರಗಳಿಂದ, ಖಾಸಗಿ ಸಂಘ ಸಂಸ್ಥೆಗಳಿಂದ ಹಾಗೂ ಹಲವಾರು ದತ್ತಿ ನಿಧಿಗಳಿಂದ ಕೊಡಲ್ಪಡುವ ವಿದ್ಯಾರ್ಥಿ ವೇತನ ಹಾಗೂ ಹಲವು ಬಹುಮಾನಗಳ ಸೌಲಭ್ಯಗಳು ನಮ್ಮಲ್ಲಿವೆ.
- ಎಸ್ಸೆಸ್ಸೆಲ್ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ 95% ಗಿಂತ ಮೇಲ್ಪಟ್ಟು ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿಶೇಷ ಶುಲ್ಕ
- ಅರ್ಹ ಬಡ ವಿದ್ಯಾರ್ಥಿಗಳಿಗೆ ಕಾಲೇಜು ಶುಲ್ಕದಲ್ಲಿ ರಿಯಾಯಿತಿಯಿದೆ.
- ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗಾಗಿ ಉಚಿತ ಮಧ್ಯಾಹ್ನದ ಭೋಜನ ವ್ಯವಸ್ಥೆಯೂ ಕಾಲೇಜಿನಲ್ಲಿ ನಡೆಯುತ್ತಾ ಬಂದಿದೆ.

## ವಿಶೇಷ ತರಗತಿಗಳು

- ಸ್ಪರ್ಧಾತ್ಮಕ ಪರೀಕ್ಷಾ ಘಟಕದ (C.E.T. CELL) ವತಿಯಿಂದ C.E.T., IIT-JEE, NEET, KVPY ಮತ್ತು ಇತರ ರಾಷ್ಟ್ರೀಯ ಮಟ್ಟದ ಮೆಡಿಕಲ್ ಹಾಗೂ ಇಂಜಿನಿಯರಿಂಗ್ ಪ್ರವೇಶ ಪರೀಕ್ಷೆಗಳಿಗೆ ಬೇಕಾದ ಮಾಹಿತಿ ಹಾಗೂ ನುರಿತ ಅಧ್ಯಾಪಕರಿಂದ ವಿವಿಧ ರೀತಿಯ ತರಬೇತಿಗಳ ಸೌಲಭ್ಯಗಳಿವೆ.
- ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ C. A. Foundation ತರಬೇತಿಯ ವ್ಯವಸ್ಥೆಯಿದೆ.
- ನಿಧಾನಗತಿ ಕಲಿಕೆಯ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಆಯಾ ವಿಷಯಗಳಲ್ಲಿ ಪ್ರತಿದಿನ ಪೂರಕ ತರಗತಿಗಳನ್ನು ನಡೆಸಲಾಗುತ್ತದೆ.
- ಪ್ರಥಮ ಪಿ.ಯು.ಸಿ. ಯಿಂದ ಉತ್ತೀರ್ಣರಾದ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ರಜಾ ಸಮಯದಲ್ಲಿ ಬ್ರಿಡ್ಜ್ ಕೋರ್ಸ್ ನಡೆಸಲಾಗುತ್ತದೆ.
- ಕಲಾ ಮತ್ತು ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಕಂಪ್ಯೂಟರ್ ಶಿಕ್ಷಣವನ್ನು ನೀಡಲಾಗುತ್ತದೆ.

## ಪರೀಕ್ಷೆಗಳು

- ಪದವಿ ಪೂರ್ವ ಶಿಕ್ಷಣ ಇಲಾಖೆ ನಿಗದಿಪಡಿಸಿದ ಪರೀಕ್ಷೆಗಳಲ್ಲದೆ ಹೆಚ್ಚುವರಿಯಾಗಿ 2 ಆಂತರಿಕ, 2 ಪೂರ್ವ ಸಿದ್ಧತಾ ಪರೀಕ್ಷೆ ಹಾಗೂ ಅನೇಕ ಕ್ಲಾಸ್ ಟೆಸ್ಟ್ ಗಳನ್ನು ನಡೆಸಲಾಗುತ್ತದೆ. ಇವೆಲ್ಲದರ ಮೌಲ್ಯಮಾಪನದ ಅಂಕಗಳನ್ನು SMS ಮೂಲಕ ಹೆತ್ತವರಿಗೆ ತಲುಪಿಸಲಾಗುವುದು.

## ಗ್ರಂಥನಿಧಿ

- ಕಾಲೇಜು ಗ್ರಂಥಾಲಯವಲ್ಲದೆ, ಸ್ಪರ್ಧಾತ್ಮಕ ಪರೀಕ್ಷೆಗಳ ಅಧ್ಯಯನಕ್ಕೆ ಪೂರಕವಾದ ವಿಶೇಷ ಪುಸ್ತಕಗಳು ವಿದ್ಯಾರ್ಥಿಗಳಿಗೆ ಸುಲಭವಾಗಿ ಇಲ್ಲಿ ಸಿಗುತ್ತದೆ.

## ವಿದ್ಯಾರ್ಥಿ ನಿಲಯಗಳು

- ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಸೂಕ್ತ ಪರಿಸರವನ್ನು ಒದಗಿಸುವಂತಹ ಮತ್ತು ಅದಕ್ಕೆ ಬೇಕಾದ ಎಲ್ಲಾ ಸೌಕರ್ಯಗಳನ್ನು ಹೊಂದಿರುವ ಹುಡುಗರ ಮತ್ತು ಹುಡುಗಿಯರ ಪ್ರತ್ಯೇಕ ವಸತಿ ಗೃಹಗಳು ಕಾಲೇಜಿನ ಆವರಣದೊಳಗೇ ಇದೆ. ಇಲ್ಲಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ನಿಗದಿತ ಪ್ರತ್ಯೇಕ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕಾಗುವುದು.

## ಪಠ್ಯೇತರ ಚಟುವಟಿಕೆಗಳು

- ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಗಳಿಗೆ ಸೂಕ್ತ ಅವಕಾಶ ನೀಡಿ ಅವರಲ್ಲಿರುವ ಸೃಜನಶೀಲತೆಯನ್ನು ಬೆಳೆಸಲು ಲಲಿತ ಕಲಾ ಸಂಘ, ವಿಜ್ಞಾನ ಸಂಘ, ವಾಣಿಜ್ಯ ಸಂಘ, ಮಾನವಿಕ ಸಂಘ, ಚಿಗುರು ಭಿತ್ತಿ ಪತ್ರಿಕೆ ಮುಂತಾದುವುಗಳು ಕಾರ್ಯನಿರ್ವಹಿಸುತ್ತಿವೆ.
- ವಿದ್ಯಾರ್ಥಿಗಳು ರಾಷ್ಟ್ರಪ್ರೇಮವನ್ನು ಬೆಳೆಸುವುದರೊಂದಿಗೆ ಮಿಲಿಟರಿ ಶಿಕ್ಷಣವನ್ನು ಪಡೆಯುವುದಕ್ಕಾಗಿ ರಾಷ್ಟ್ರೀಯ ಸೇನಾ ದಳದ (N.C.C. Senior Division) ಆರ್ಮಿ ವಿಭಾಗ ನಮ್ಮಲಿದೆ.

## ಶಿಕ್ಷಕ – ರಕ್ಷಕ ಸಂಘ

- ಹೆತ್ತವರು, ವಿದ್ಯಾರ್ಥಿಗಳು ಮತ್ತು ಶಿಕ್ಷಕರ ನಡುವೆ ನೇರ ಸಂಪರ್ಕವನ್ನು ಕಲ್ಪಿಸುವ ಕೆಲಸವನ್ನು ಶಿಕ್ಷಕ – ರಕ್ಷಕ ಸಂಘವು ನಿರ್ವಹಿಸುತ್ತಿದೆ. ಹೆತ್ತವರು ಈ ಸಂಘದ ಕಾರ್ಯಗಳಲ್ಲಿ ಸಹಭಾಗಿಗಳಾಗಿ ಕಾಲೇಜಿನ ಸರ್ವತೋಮುಖ ಅಭಿವೃದ್ಧಿಗೆ ಕೈಜೋಡಿಸಲು ಅವಕಾಶವಿದೆ.

## ವಿದ್ಯೆ ಮತ್ತು ಶಿಸ್ತು

- ಒಬ್ಬ ವ್ಯಕ್ತಿಯ ಸರ್ವೋತೋಮುಖ ಬೆಳವಣಿಗೆಗೆ ಯೋಗ್ಯ ವಿದ್ಯಾಭ್ಯಾಸದೊಂದಿಗೆ ಶಿಸ್ತು, ಸಂಯಮಗಳು ಅತ್ಯವಶ್ಯಕ. ಈ ದೃಷ್ಟಿಯಿಂದ ಈ ಕೆಳಗಿನ ನಿಯಮಗಳನ್ನು ಕಾಲೇಜಿನಲ್ಲಿ ಕಡ್ಡಾಯವಾಗಿ ಅನುಸರಿಸಲಾಗುತ್ತದೆ.
- ಬೆಳಗ್ಗಿನ ಅವಧಿಯ ಸರಸ್ವತಿ ವಂದನಾದೊಂದಿಗೆ ಆರಂಭವಾಗುವುದು.
- ತರಗತಿಗಳ ವೇಳಾಪಟ್ಟಿಯನ್ನು ತಪ್ಪದೇ ಅನುಸರಿಸುವುದು.
- ತರಗತಿಗೆ ಮತ್ತು ಪರೀಕ್ಷೆಗಳಿಗೆ ಕಡ್ಡಾಯ ಹಾಜರಾತಿ.
- ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕಡ್ಡಾಯ ಭಾಗವಹಿಸುವಿಕೆ.
- ಮಾದಕ ದ್ರವ್ಯ, ಮದ್ಯ ಮುಂತಾದ ಜೀವಹಾನಿ ವಸ್ತುಗಳಿಂದ ವಿದ್ಯಾರ್ಥಿಗಳು ದೂರವಿರುವುದು.
- ತರಗತಿಯನ್ನು, ಆವರಣವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು.
- ಮೊಬೈಲ್ ಮುಂತಾದ ಇಲೆಕ್ಟ್ರಾನಿಕ್ಸ್ ವಸ್ತುಗಳನ್ನು ಕಾಲೇಜಿನ ಆವರಣದಲ್ಲಿ ಯಾವಾಗಲೂ ಬಳಸದಿರುವುದು.
- ಕಾಲೇಜಿನಿಂದ ನಿಗದಿಯಾದ ಸಮವಸ್ತ್ರವನ್ನೇ ಕಡ್ಡಾಯವಾಗಿ ಧರಿಸುವುದು.

## SPECIAL FEATURES

- CA Foundation Coaching Classes for CA Aspirants
- Bridge Course Facility for Science Students
- Specialist and Outstanding Teachers
- Frequent Examinations and Continuous & Comprehensive Evaluation
- Regular contact with parents through Parent Teacher Association (PTA)
- Entrance Exam Cell
- Well-equipped Library and Laboratories
- Compulsory Computer Training
- Fee concession for students who score 95% and above in SSLC
- Training for CET, IIT-JEE, NEET& Other National Level Medical & Engineering Entrance Exams
- On Campus Hostels for Students with Spacious and Learning Conducive Rooms, Delicious & Healthy Hygienic Food
- Free Midday Meals & Fee Concession for the Poor & Deserved
- Special Guidance for Slow Learners & Special Coaching for Hostel Students
- A number of Varieties of Scholarships to Studious, Focused, Erudite and Deserving Students
- Free Education for Students who score 98% and above in SSLC
- Yoga Classes to Improve Memory Power & to Enhance Concentration
- **SPECIAL BATCH :** Separate Batch of Medical & Engineering Aspirant Students, in which Intense Coaching in Theory, NEET and JEE will be given to the Students by Experienced, Senior Faculty



## ವಿಶೇಷ ಸೂಚನೆಗಳು

- ಎಸ್.ಎಸ್.ಎಲ್.ಸಿ. ಪರೀಕ್ಷೆಯ ಫಲಿತಾಂಶ ಪ್ರಕಟವಾದೊಡನೆ ನಿಗದಿತವಾದ ಪ್ರವೇಶ ಪತ್ರವನ್ನು ಎಲ್ಲಾ ವಿವರಗಳೊಂದಿಗೆ ಭರ್ತಿ ಮಾಡಿ 200/- ನೋಂದಾವಣೆ ಶುಲ್ಕದೊಂದಿಗೆ ಪ್ರಾಂಶುಪಾಲರಿಗೆ ಸಲ್ಲಿಸಬೇಕು.
- ಆಯ್ಕೆಯಾದ ವಿದ್ಯಾರ್ಥಿಗಳ ಹೆಸರನ್ನು ಮತ್ತು ಅವರು ಸಂದರ್ಶನಕ್ಕೆ ಹಾಜರಾಗಬೇಕಾದ ದಿನಾಂಕವನ್ನು ಕಾಲೇಜಿನ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು.
- ಸಂದರ್ಶನಕ್ಕೆ ಹಾಜರಾಗುವ ಸಮಯದಲ್ಲಿ ವಿದ್ಯಾರ್ಥಿಗಳು ಈ ಕೆಳಗಿನ ಪ್ರಮಾಣ ಪತ್ರಗಳನ್ನು ಕಾಲೇಜು ಕಛೇರಿಗೆ ಸಲ್ಲಿಸಬೇಕು.
- ಎಸ್.ಎಸ್.ಎಲ್.ಸಿ / ತತ್ಸಮ ಪರೀಕ್ಷೆಯ ಪ್ರಮಾಣ ಪತ್ರ
- ವ್ಯಾಸಂಗ ಮಾಡಿದ ಸಂಸ್ಥೆಯ ವರ್ಗಾವಣಾ ಪತ್ರ ಮತ್ತು ಗುಣ ನಡತೆಯ ಪ್ರಮಾಣ ಪತ್ರ
- ಪರಿಶಿಷ್ಟ ಜಾತಿ ಹಾಗೂ ಪಂಗಡವರಿಗೆ ಜಾತಿ ಹಾಗೂ ಆದಾಯ ಪ್ರಮಾಣ ಪತ್ರ
- ವಿದ್ಯಾರ್ಥಿಯು ಪ್ರವೇಶದ ಸಂದರ್ಭದಲ್ಲಿ ಆಧಾರ್ ಕಾರ್ಡ್ ಪ್ರತಿ ಹಾಗೂ ಪಾಸ್‌ಪೋರ್ಟ್ ಅಳತೆಯ ತನ್ನ ಇತ್ತೀಚಿನ ನಾಲ್ಕು ಭಾವಚಿತ್ರಗಳನ್ನು ಕಾಲೇಜು ಕಚೇರಿಗೆ ಸಲ್ಲಿಸಬೇಕು.
- ವಿದ್ಯಾರ್ಥಿಯು ಎಸ್. ಎಸ್. ಎಲ್. ಸಿ. ಪರೀಕ್ಷೆಯ ಪ್ರವೇಶಪತ್ರದ ನಕಲುಪ್ರತಿ, ದೃಢೀಕರಿಸಿದ ಅಂಕಪಟ್ಟಿಯ ಪ್ರತಿ ಹಾಗೂ ರಕ್ತದ ಗುಂಪಿನ ವರ್ಗೀಕರಣದೊಂದಿಗೆ ಬರುವುದು.
- ಪ್ರವೇಶದ ಸಂಧರ್ಭದಲ್ಲಿ ವಿದ್ಯಾರ್ಥಿಯ ಹೆತ್ತವರು ಅಥವಾ ಪೋಷಕರು ಖುದ್ದಾಗಿ ಹಾಜರಿರಬೇಕು,
- ವಿದ್ಯಾರ್ಥಿಯು ಕಾಲೇಜಿನಲ್ಲಿರುವಾಗ ಒಳ್ಳೆಯ ಗುಣ ನಡತೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ಮತ್ತು ಕಾಲೇಜಿನ ನಿಯಮಾವಳಿಗಳಿಗೆ ಬದ್ಧರಾಗಿರುವ ಬಗ್ಗೆ ಆತ/ ಆಕೆ ಮತ್ತು ಹೆತ್ತವರು/ಪೋಷಕರು ಸೇರಿ ದೃಢೀಕರಣ ಪತ್ರ ನೀಡಬೇಕಾಗುವುದು.
- ಆಯ್ಕೆಯಾದ ವಿದ್ಯಾರ್ಥಿಗಳು ನಿಗದಿತ ದಿನಾಂಕದೊಳಗೆ ಸಂಬಂಧಿತ ಶುಲ್ಕಗಳನ್ನೆಲ್ಲಾ ಪಾವತಿಸಿ ತರಗತಿಗೆ ಸೇರಬೇಕು, ಕಾಲೇಜಿಗೆ ತೆತ್ತ ಶುಲ್ಕವನ್ನು ಯಾವುದೇ ಸಂದರ್ಭದಲ್ಲೂ ಹಿಂತಿರುಗಿಸಲಾಗುವದಿಲ್ಲ,
- ಎಲ್ಲಾ ಪ್ರವೇಶಗಳೂ ತಾತ್ಕಾಲಿಕವಾಗಿದ್ದು, ಆನಂತರ ಪದವಿ ಪೂರ್ವ ಶಿಕ್ಷಣ ಮಂಡಳಿಯ ಅನುಮೋದನೆ ಪಡೆಯಬೇಕಾಗುತ್ತದೆ.
- ಸರಕಾರದ ಆದೇಶದಂತೆ ಆಯ್ಕೆಯ ಸಂದರ್ಭದಲ್ಲಿ ಮೀಸಲಾತಿ ನಿಯಮಗಳನ್ನು ಪಾಲಿಸಲಾಗುವುದು.
- ತರಗತಿಗಳ ಪ್ರಾರಂಭದ ದಿನಾಂಕವನ್ನು ಕಾಲೇಜಿನ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ಪ್ರವೇಶ ಶುಲ್ಕದ ಸ್ವರೂಪ ಮತ್ತು ಪ್ರವೇಶದ ನಿಯಮಗಳನ್ನು ಆವಶ್ಯಕಂಡಲ್ಲಿ ತಿದ್ದುಪಡಿ ಮಾಡುವ ಹಕ್ಕನ್ನು ಕಾಲೇಜಿನ ಆಡಳಿತ ಮಂಡಳಿ ಕಾದಿರಿಸಿಕೊಂಡಿದೆ.

- The students should submit filled in forms soon after S.S.L.C. results along with application fee Rs. 200/-
- The Names of the selected students and the date of the interview will be displayed on the college notice board.
- The Students must submit the following documents to the college office while coming on the day of the interview .
- SSLC Marks card/Equivalent Certificate
- T.C. and Conduct Certificate
- Caste & Income Certificate for SC/ST Students.
- The students must submit Aadhar card copy and 4 passport size photo to the office during admission.
- The Students must submit the photocopy of SSLC hall ticket, attested copy of Marks card and blood group certificate.
- The Parents or guardian must be present on the day of admission.
- The Students must abide by the rules and regulations of the college and PU department and the parents should give the declaration letter regarding the same on the day of admission
- The selected students must pay the college related fees on or before the given date and attend the classes. The fee once paid will not be returned.
- Admission is provisional until it is approved by the PU Board Order
- Reservation Rules will be followed as per the Government order during the time of admission.
- The Date of the commencement of the classes will be displayed on the college notice board.
- The College Management has the right to alter the structure of admission fee and rules of the admission.

# ಕಳೆದ ಐದು ವರ್ಷಗಳಲ್ಲಿ ಕಾಲೇಜಿನ ಫಲಿತಾಂಶ

## 2015-16

| ಹಾಜರಾದ ವಿದ್ಯಾರ್ಥಿಗಳು | ಒಟ್ಟು ಫಲಿತಾಂಶ(%) | ವಿಶಿಷ್ಟ ಶ್ರೇಣಿ | ಪ್ರಥಮ ದರ್ಜೆ |
|---|---|---|---|
| 953 | 96.3% | 281 | 553 |

## 2016-17

| ಹಾಜರಾದ ವಿದ್ಯಾರ್ಥಿಗಳು | ಒಟ್ಟು ಫಲಿತಾಂಶ(%) | ವಿಶಿಷ್ಟ ಶ್ರೇಣಿ | ಪ್ರಥಮ ದರ್ಜೆ |
|---|---|---|---|
| 1083 | 96.43% | 322 | 609 |

## 2017-18

| ಹಾಜರಾದ ವಿದ್ಯಾರ್ಥಿಗಳು | ಒಟ್ಟು ಫಲಿತಾಂಶ(%) | ವಿಶಿಷ್ಟ ಶ್ರೇಣಿ | ಪ್ರಥಮ ದರ್ಜೆ |
|---|---|---|---|
| 1080 | 97% | 290 | 619 |

## 2018-19

| ಹಾಜರಾದ ವಿದ್ಯಾರ್ಥಿಗಳು | ಒಟ್ಟು ಫಲಿತಾಂಶ(%) | ವಿಶಿಷ್ಟ ಶ್ರೇಣಿ | ಪ್ರಥಮ ದರ್ಜೆ |
|---|---|---|---|
| 986 | 93.5% | 229 | 533 |

## 2020-21

| ಹಾಜರಾದ ವಿದ್ಯಾರ್ಥಿಗಳು | ಒಟ್ಟು ಫಲಿತಾಂಶ(%) | ವಿಶಿಷ್ಟ ಶ್ರೇಣಿ | ಪ್ರಥಮ ದರ್ಜೆ |
|---|---|---|---|
| 822 | 100% | 305 | 456 |



# Our Dynamic High-Flyers

## Sinchanalakshmi



- KCET 2021 : 530th Rank in Agriculture B.Sc.
  1582th Rank in Engineering
  974th Rank in Naturopathy & Yoga
- JEE Advance : 106th Rank in National Level
- NEET2021 : 2nd Rank in PWD Category
  (National Level) 2856th Rank

## Hemaswathi



- NCC – Senior under Officer.
- Participated in 2022 Republic Parade and Cultural Program at Dehli.
- Participated in IDSSC Firing Camp.



**Amritha Bhat T P**
KCET 2021 : 579th Rank in Agriculture B.Sc.
1153rd Rank in Engineering.



**Ganeshkrishna B**
KCET 2021: 677th Rank in Engineering.
1385th Rank in Agriculture B.Sc.



**Chinmayi**
KCET 2021: 784th Rank in Engineering



**Avaneesh K**
KCET 2021: 1383rd Rank in Engineering



**Shefalica**
NATA 2021: 254th Rank in Architecture

## CA Foundation Prodigies



*Shilpa M K*



*Suhas H Nayak*



*Mokshith Kumar*



*Ramachandra Vidyasagar*



*Tejas K*



*Dhanush B*



*Swaroop Roopesh*



*Anush*



*Greeshma*

# VIVEKANANDA
## PRE UNIVERSITY COLLEGE


A Unit of Vivekananda Vidyavardhaka Sangha Puttur (R.)
Nehru Nagara, Puttur -574203

For More Details Contact:
www.vivekanandaedu.org
ss016puc@gmail.com
08251-237455 | 9483146330